ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸದಸ್ಯರು ಖಾಯಂ ಆಗಿ ವಾಸವಾಗಿರುವ ಹೆಡ್‌ಕ್ವಾರ್ಟರಿನಿಂದ ಕೊಟ್ಟಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕಸಾರಿ ಕೆಲವರು ಸಮಿತಿಯ ಕೆಲಸಕ್ಕಾಗಿ ಡೆಲ್ಲಿಯಿಂದ ಬರಬೇಕಾಗಿ ಬಂದು ಅವರಿಗೆ ಕೊಡುವ ಭತ್ಯದ ಮೊಬಲಗಿಗಿಂತ ಹೆಚ್ಚಾಗಿ ಖರ್ಚು ಮಾಡಬೇಕಾಯಿತೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕೆಲವು ಸಂದರ್ಭದಲ್ಲಿ ಹಾಗಾಗಿದೆಯೆಂದು ತಿಳಿದು ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಿದ್ದಪಕ್ಷದಲ್ಲಿ ಅದಕ್ಕೆ ತಕ್ಕಂತೆ ಹೆಚ್ಚು ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಅವರು ದಾನ ಧರ್ಮಗಳನ್ನು ಮಾಡಿದ್ದಾರಲ್ಲ, ಅದನ್ನು ಏನು ಮಾಡುತ್ತೀರಿ!

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತಮ್ಮ ಪ್ರಶೆ ಸರಿಯಾಗಿ ಗೊತ್ತಾಗಲಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸ್ಕೂಲು, ಕಾಲೇಜುಗಳನ್ನೂ ಮತ್ತು ಆಸ್ಪತ್ರೆಗಳನ್ನೂ ಕಟ್ಟಿಸಲು ಅವರು ಹಣವನ್ನು ದಾನ ಮಾಡಿದ್ದಾರೆ, ಅದನ್ನು ಏನು ಮಾಡುತ್ತೀರಿ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ದಾನ ಮಾಡಿದ್ದು ದಾನವಾಯಿತು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಶ್ರೀ ಗೋಪಾಲರಾಯರಿಗೆ ಸಹಾಯಕರಾಗಿ ನಿಂತು ಅವರ ವ್ಯವಹಾರಗಳಿಗೆ ಸಹಾಯ ಮಾಡಿದ ಅಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಹಂಚಿಕೆಯಾಗಿ ಏನಾದರೂ ಹಣ ಉಳಿದಿದೆಯೇ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಸ್ವಲ್ಪ ಉಳಿದಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.— ಇನ್ನೂ ವಸೂಲಾಗುತ್ತದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕಾಣಲಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—ಉಳಿದಿರುವ ಹಣವನ್ನು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಕೊಟ್ಟವ್ವವರಿಗೆ ಹಂಚುವುದು ಸೂಕ್ತವಲ್ಲವೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅವರೆಲ್ಲರಿಗೂ ಹಂಚಿದರೆ ತುಂಬ ಕಡಿಮೆ ಬರುತ್ತದೆ, ಅದನ್ನು ಯಾವ ರೀತಿ ವಿನಿಯೋಗಿಸಬೇಕು ಎಂಬುದು ಸರ್ಕಾರದ ಪರಿಶೀಲನೆಯಲ್ಲದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಬಹಳ ಕಡಿಮೆ ಹಣ ಕೊಟ್ಟಿದ್ದವರಿಗೆ ಈ ಹಣವನ್ನು ಹಂಚುವ ವಿಚಾರವನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾಡುತ್ತೇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಲ್ಪ ಹಣ ಉಳಿದಿದೆಯೆಂದು ಹೇಳಿದಿರಿ, ಇದನ್ನು ಸಮಿತಿಯ ಸದಸ್ಯರಿಗೆ ಲಂಪ್‌ಸಂ ಗ್ರಾಂಟು ರೂಪದಲ್ಲಿ ಕೊಡುವ ವಿಷಯ ಆಲೋಚನೆಯಲ್ಲದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸರ್ಕಾರದವರು ಇದುವರೆಗೆ ಆ ರೀತಿಯಾಗಿ ಏನೂ ಯೋಚನೆ ಮಾಡಿಲ್ಲ.

Guests Entertained by Government.

Q. 15.) Mushir-ul Mulk J. MAHOMED IMAM (Chitaldrug *cum* Tumkur—Muslim).—Will the Government be pleased to state.—

(a) the number of guests that were entertained by the Government during the years 1948-49 and 1949-50;

(b) the cost incurred by them on this account during each year.

A. Sri K. CHENGALARAYA REDDY (Chief Minister).—

(a) 1,273 in the year 1948-49 and 665 in 1949-50 (Up to end of December 1949);

(b) Rs. 2,73,981-11-9 for 1948-49 and Rs. 1,21,439-12-11 for 1949-50 (Up to the end of December 1949).

ಜನಾಬ್ ಜೆ. ಮಹಮ್ಮದ್ ಇಮಾಂರವರು.—1948-49ರಲ್ಲಿ 1273 ಜನರೆಂದು ಉತ್ತರದಲ್ಲಲ್ಲದೆ. ಈ ಅಥಿತಿಗಳನ್ನು ತಾವೇ ಆಹ್ವಾನಿಸಿದ್ದಿರೋ ಅಥವಾ ಅವರಾಗಿಯೇ ಆಹ್ವಾನ ಮಾಡಿಕೊಂಡು ಬಂದರೊ?

Sri K. CHENGALARAYA REDDY.—The question cannot be divided so nicely like that. Certain persons who were coming here were treated as State Guests. There was no occasion where a person forced himself as a State Guest.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅವರಲ್ಲಿ ಅನೇಕರು ನಾವು ಬರುತ್ತೇವೆ, ನಮ್ಮನ್ನು ಅತಿಥಿಗಳಾಗಿ ತೆಗೆ ದುಕೊಂಡು accommodate ಮಾಡಬೇಕೆಂದು ಬರೆದುಕೊಂಡಿದ್ದರೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಹಾಗೆ ಬರೆಯುವುದಿಲ್ಲ. ಬೆಂಗಳೂರಿಗೆ ಯಾರಾದರೂ ದೊಡ್ಡ ಅತಿಥಿಗಳು ಬರಬೇಕಾದರೆ ಇಲ್ಲಿ ಅವರಿಗೆ accommodation ದೊರೆಯುವುದು ಕಷ್ಟವಾಗಿರುವುದರಿಂದ, accommodation ಏರ್ಪಾಡು ಮಾಡಿ ಕೊಡಿ ಎಂದು ಬರೆಯುತ್ತಾರೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—"ಅತಿಥಿಗಳು" ಎಂದು ಪರಿಗಣಿಸುವುದರಲ್ಲಿ ಸರ್ಕಾರದವರು ಯಾವುದಾದರೂ ಒಂದು ಗೊತ್ತಾದ ಕ್ರಮವನ್ನು ಅನುಸರಿಸುತ್ತಿದ್ದಾರೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಾಮಾನ್ಯವಾಗಿ Ministerial level ನಲ್ಲಿರುವವರು ಯಾರಾದರೂ ಬಂದರೆ ಅವರನ್ನು ಅತಿಥಿಗಳಾಗಿ ಪರಿಗಣಿಸುತ್ತೇವೆ. ಭಾರತದ ಹೊರಗಿನಿಂದ ಬರುವವರನ್ನು

ಅತಿಥಿಗಳೆಂದು ಪರಿಗಣಿಸುತ್ತೀವೆ. ಇನ್ನು ಕೆಲವರು ವಿಶೇಷ ಸಮಿತಿಗಳಿಗೆ ಬರುವವರನ್ನು ಅತಿಥಿಗಳಾಗಿ ಪರಿಗಣಿಸುತ್ತೀವೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಎಷ್ಟೋ ಜನ ordinary Captains ನಂತಹ ಮಿಲಿಟರಿ ಅಧಿತಿಗಳು ಅತಿಥಿಗಳಾಗಿ ಬಂದಿರುವುದು ಸರ್ಕಾರದವರಿಗೆ ಗೊತ್ತಿದೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬಡ್ಜೆಟ್ ಮೇಲೆ ಮಾತನಾಡುವಾಗಲೇ ಕೆಲವು ವಿಷಯಗಳನ್ನು ಹೇಳಿದ್ದೇನೆ. ಇಲ್ಲಿ ನರಿಯಾದ ಹೊಟೇಲುಗಳಿಲ್ಲದೇ ಇರುವುದರಿಂದ ಕೆಲವು ಸಂದರ್ಭಗಳಲ್ಲಿ ಕೆಲವರನ್ನು ಸರ್ಕಾರದ ಅತಿಥಿಗಳಾಗಿ ಪರಿಗಣಿಸುತ್ತಿದ್ದೇವೆ. ನರಿಯಾದ ಸ್ಥಳವಸತಿ ಏರ್ಪಾಡಾದಮೇಲೆ ಯಾರನ್ನು ಸರ್ಕಾರದ ಅತಿಥಿಗಳಾಗಿ ಪರಿಗಣಿಸಬೇಕೆಂಬುದನ್ನು ಪರಿಶೀಲಿಸುತ್ತೀವೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಈ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಅತಿಥಿಗಳು ಕಡಿಮೆಯಾಗಿದ್ದುದು ಗೊತ್ತಿದೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಗೊತ್ತಿದೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಆಗ ಹೊರಗಿನಿಂದ ಬಂದ ಅನೇಕರು ಹೊಟೇಲುಗಳಿಗೆ ಹೋಗುತ್ತಿದ್ದುದು ಗೊತ್ತಿದೆಯೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗಿನ ಸರ್ಕಾರದವರು ಯಾವ ರೀತಿ ಮಾಡುತ್ತಿದ್ದಾರೆಂಬುದೂ ಗೊತ್ತಿದೆ. ಈಗಿನ ಸರ್ಕಾರದವರು ಯಾವ ರೀತಿ ಮಾಡುತ್ತಿದ್ದಾರೆಂಬುದೂ ಗೊತ್ತಿದೆ. ಅದನ್ನೆಲ್ಲಾ ಹೇಳಲು ಬಹಳಕಾಲ ತೆಗೆದುಕೊಳ್ಳಬೇಕಾಗುತ್ತದೆ. ಒಟ್ಟನಲ್ಲಿ ಹೇಳುವುದಾದರೆ, ಎರಡು ಮೂರು ವರ್ಷಗಳಿಂದೀಚೆಗೆ ಕೇಂದ್ರ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಸಂಬಂಧ ನಿಕಟವಾಗಿರುವುದರಿಂದ ಅನೇಕ ವಿಚಾರಗಳನ್ನು ಪರಸ್ಪರ ಸೇರಿ ಚರ್ಚೆ ಮಾಡಬೇಕಾಗಿ ಬಂದಿರುವುದರಿಂದ, ಇದು ಸ್ವಲ್ಪ ಹೆಚ್ಚಾಗಿದೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಹೀಗೆ ಅನೇಕರನ್ನು ಅತಿಥಿಗಳಾಗಿ ತೆಗೆದುಕೊಳ್ಳುವ ಪದ್ಧತಿ ಮದರಾಸು, ಬೊಂಬಾಯಿ, ದೆಹಲಿ ಮುಂತಾದ ಕಡೆಗಳಲ್ಲಿ ಇದೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಮ್ಮನ್ನು ನೋಡಿಕೊಂಡು ಈಚೆಗೆ ಅವರೂ ಈ ಪದ್ಧತಿಯನ್ನು ಆಚರಣೆಗೆ ತರುತ್ತಿದ್ದಾರೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ನಮ್ಮ ಸಂಸ್ಥಾನದ ದೊಡ್ಡ ದೊಡ್ಡ ಅಧಿಕಾರಿಗಳು ಅಲ್ಲಿಗೆ ಹೋದಾಗ ಅವರು ಈ ರೀತಿ ಮಾಡಿ reciprocity ತೋರಿಸಿರುವ ಸಂದರ್ಭವಿದೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗ ತಾನೇ ಹೇಳಿದೆ, ಅವರೂ ಇದನ್ನು ಅನುಸರಿಸುತ್ತಿದ್ದಾರೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ನಮ್ಮಂತಹ ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರು ಹೋದರೆ ಅಲ್ಲಿ ಅತಿಥಿಗಳಾಗಿ ಗಣನೆ ಮಾಡ ತ್ತಾರೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಲ್ಲಿಂದ ಅಸೆಂಬ್ಲಿ ಸದಸ್ಯರು ಬಂದರೆ ಎಲ್ಲರನ್ನೂ ನಾವು ಆರೀತಿ ತೆಗೆದುಕೊಳ್ಳುವುದಿಲ್ಲ.

Janab J. MAHOMED IMAM.—I can give instances.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಲ್ಲರನ್ನೂ ಹಾಗೆ ತೆಗೆದುಕೊಳ್ಳುವುದಿಲ್ಲ; Unless they are specifically invited, they will not be treated as guests.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ನಮ್ಮ ದೊಡ್ಡದೊಡ್ಡ ಅಧಿಕಾರಿಗಳೂ, ಮಂತ್ರಿಗಳೂ ಎರಡು ವರ್ಷದಿಂದೀಚೆಗೆ ಅಲ್ಲಿಗೆ ಹೋದಾಗ ಅವರನ್ನು ಸರ್ಕಾರದ ಅತಿಥಿಗಳಾಗಿ treat ಮಾಡಿರುವ ಸಂದರ್ಭಗಳಿವೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಷ್ಟೇನೂ ಇಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಇನ್ನಾದರೂ ಬೇರೆ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಂಡು ಅತಿಥಿಗಳು ಯಾರ್ಯಾರನ್ನು ತೆಗೆದುಕೊಳ್ಳಬೇಕೆಂಬುದನ್ನು ನಿರ್ಧರ ಮಾಡುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗಲೇ ಒಂದು ನೀತಿ ಇದೆ. ಇನ್ನೂ ನಿರ್ದಿಷ್ಟವಾಗಿ ಏನೂ ಮಾಡಬೇಕಾಗಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಯಾವ ನೀತಿ ಅನುಸರಿಸುತ್ತಾ ಇದ್ದೀರಿ ಎಂಬುದನ್ನು ಹೇಳಲಿಲ್ಲ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಹಿಂದಿನ ಸರ್ಕಾರದವರು ಏನು ಮಾಡಿದ್ದರು, ನಾವು ಏನು ಮಾಡುತ್ತಿದ್ದೇವೆ ಎಂಬುದನ್ನು ಹೇಳಬೇಕಾಗಿಲ್ಲ. ಅದು ಹೆಚ್ಚಾಗುತ್ತದೆ. ಈಗ ಯಾವ ನೀತಿ ಅನುಸರಿಸುತ್ತಿದ್ದಾರೆ ಎಂಬುದನ್ನು ಹೇಳಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಶ್ರೀಮಾನ್ ಕಾನನ್ ಡಾಯಲ್ ಮತ್ತು ಶ್ರೀಮತಿ ಕಾನನ್ ಡಾಯಲ್‌ರವರು ಎಷ್ಟು ದಿನ ಅತಿಥಿಗಳಾಗಿದ್ದರು ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—ಬರ್ನ್‌ಸ್ವೈಡ್ ಎನ್ನುವವರು ಎಷ್ಟುದಿನ ಅತಿಥಿಗಳಾಗಿದ್ದರು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಬಲ್ಲರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬರ್ನ್‌ಸ್ವೈಡ್‌ರವರು ಅರಮನೆಯ ಅತಿಥಿಗಳಾಗಿದ್ದರೇ ಹೊರತು ಸರ್ಕಾರದ ಅತಿಥಿಗಳಾಗಿರಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಸೆಂಟ್ರಲ್ ಪಾರ್ಲಿಮೆಂಟರಿ ಸದಸ್ಯರು ಕೆಲವರು ಸರ್ಕಾರದ ಅತಿಥಿಗಳಾಗಿರಲಿಲ್ಲವೇ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಕ್ಕೂ ನೋಟೀಸ್ ಬೇಕು.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—(ಬ) ಪ್ರಶ್ನೆಗೆ ಉತ್ತರವಾಗಿ ರೂ. 2,73,981-11-9 ಎಂದು ತಿಳಿಸಿದ್ದೀರಿ. ಅದು purely entertainment charges" ತಾನೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು.

ಶ್ರೀ ಎಲ್. ಸಿದ್ದಪ್ಪನವರು.—ಅದರಲ್ಲಿ carriage charges ಆಗಲೀ aeroplane charges ಆಗಲೀ ಸೇರಿಲ್ಲವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ತಾವು ಬಡ್ಜೆಟ್ ಭಾಷಣದಲ್ಲಿ ಹಿಂದಿನ ಮಂತ್ರಿಮಂಡಲದೊಳಗೆ 16 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೀರಿ. ಅದರಲ್ಲಿ ಮೈಸೂರು ಅರಮನೆಯಲ್ಲಿ ಸಿಂಹಾಸನ ಮಾಡಿಸಿದ್ದು,

ದರ್ಬಾರಿಗೆ ಅತಿಥಿಗಳು ಬಂದಾಗ ಅವರಿಗೆ ದರ್ಬಾರ್ ಪ್ರೆಸೆಂಟ್ ಕೊಟ್ಟಿದ್ದು, ಮಹಾರಾಜರವರ Staff and House-hold ಸಂಬಳ ಸಾರಿಗೆ ಇವೆಲ್ಲಾ ಸೇರುತ್ತ ದೆಯಲ್ಲವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದರಲ್ಲಿ ಸೇರಿದೆ ಎಂದು ಹೇಳಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—ಕೇವಲ ಅತಿಥಿಗಳ ಸತ್ಕಾರಕ್ಕಾಗಿ ಎಷ್ಟು ಖರ್ಚಾಗಿದೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋ ಟೀಸ್ ಬೇಕು. ಇಷ್ಟು ಹೇಳಬಲ್ಲೆ. Comparative figures ಕೊಟ್ಟಿದೆ. ಅದನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು — ಹಾಗಾದರೆ ಇದು ಖಾಲಿ ದಬಾವಣೆ ಎಂದು ಹೇಳಬಹುದೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಧಾರ ಭೂತವಾವ ದಬಾವಣೆ ಎಂತರೇ ತಿಳಿದುಕೊಳ್ಳಬಹುದು.

ಶ್ರೀ ಎಲ್. ಸಿದ್ದಪ್ಪನವರು.—ರೂ. 2,73,981-11-9 ಕೇವಲ ಅತಿಥಿಗಳ ಸತ್ಕಾರಕ್ಕೆ ಎಂದು ತೋರಿಸಿದ್ದೀರಿ. ಇದಕ್ಕೆ ಸಂಬಂಧಿಸಿದ ಅಂಕೆ ಅಂಶಗಳು ಹಿಂದಿನವರ್ಷ ಗಳಲ್ಲಿ ಎಷ್ಟು ಎಂಬುದನ್ನು ಹೇಳುವುದಕ್ಕಾಗುತ್ತ ದೆಯೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಂಕಿ ಅಂಶ ಗಳನ್ನು compare ಮಾಡಿದರೆ ಗೊತ್ತಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಅಂಕಿ ಅಂಶಗಳನ್ನು ನೋಡಿದ್ದರಲ್ಲಿ ಈಗ ಆಗಿರುವುದಕ್ಕಿಂತಲೂ, ಆಗ ಆಗಿ ರುವುದು ಅದಕ್ಕಿಂತ ಕಡಿಮೆ ಎಂದು ಹೇಳಿದರೆ ಒಪ್ಪು ತ್ತೀರಾ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು hypothetical question. ಆ ರೀತಿ ಹೇಳಿದರೆ ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ ?

ಶ್ರೀ ಎಲ್. ಸಿದ್ದಪ್ಪನವರು.—ಆ ಅಂಕಿ ಅಂಶ ಇಲ್ಲೇ ಇದೆ ; ಓದಿ ಹೇಳುತ್ತೇನೆ. 1947–48ರಲ್ಲಿ 1,55,400 ರೂಪಾಯ ಆಗಿದೆ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇರಬ ಹುದು. I am aware of that information.

Sri L. SIDDAPPA.—I am referring to this because I was not in a position to reply to him the other day. The other day he said that it was a reckless statement that I made.....

Sri K. CHENGALARAYA REDDY.—Sir, I rise to a point of order. If the Hon'ble Member wants to make use of this occasion to make it appear that I was extravagant in my remark and he was justified in his remark, I am afraid he will not succeed in that attempt. I have got more figures than he can possibly think of placing before this House now. Let him please remember that the comparison was between the figures that he gave when he stated that the Government had spent Rs. 7½ lakhs on entertainment guests. As against that I pointed out that in a particular year it was Rs. 16 lakhs. Beyond that there was no comparison. I gave the figures the very day. I anticipated the answer to that question and gave the figures myself.

Sri L. SIDDAPPA.—When the Honourable Chief Minister gave these figures he said "I will come to my friend's rescue only to the extent of Rs. 6 lakhs". That is what he said giving an impression.....

Sri K. CHENGALARAYA REDDY.—It is there in the proceedings. I gave these figures that very day.

ಶ್ರೀ ಎಲ್. ಸಿದ್ದಪ್ಪನವರು.—1945-46ರಲ್ಲಿ ಆ ಬಾಬಿಗೆ ಸರ್ಕಾರದವರು ಖರ್ಚು ಮಾಡಿರುವುದು 96,000 ರೂಪಾಯಿ. ಇದರಿಂದ ಏನು ವ್ಯಕ್ತವಾಗು ತ್ತದೆ ?

Sri K. CHENGALARAYA REDDY.—I want notice for that.

ಶ್ರೀ ಎಲ್. ಸಿದ್ದಪ್ಪನವರು.—1949-50ನೇ ಸಾಲಿಗೆ ರೂ. 1,21,439–12–11 ಕೊಟ್ಟಿರುವುದು 6 ತಿಂಗಳಿಗೆ ಮಾತ್ರ ಅಲ್ಲವೇ ?

ಅಧ್ಯಕ್ಷರು.—ಅದಕ್ಕೆ ಉತ್ತರ ಅಲ್ಲೇ ಇದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಅತಿಥಿಗಳೆಲ್ಲರೂ (ಎ) ಕ್ಲಾಸ್‌ನವರೇನೋ (ಬಿ) ಕ್ಲಾಸ್, (ಸಿ) ಕ್ಲಾಸ್ ಅಂತಲೂ ಇದೆಯೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಜೈಲ ನಲ್ಲಿ. ಇಲ್ಲಿ ಆ ರೀತಿ ಏನೂ ಇಲ್ಲ. (ನಭೆಯಲ್ಲಿ ನಗು !)

ಶ್ರೀ ಎಸ್. ರಂಗರಾಮಯ್ಯನವರು.—ಅತಿಥಿಗ ಳಾಗಿ ಬರುವವರಲ್ಲಿ ಸರ್ಕಾರದ ಅತಿಥಿಗಳಾಗಿ ಬರುವ ವರು ಜಾಸ್ತಿಯೆ ; ಅರಮನೆ ಅತಿಥಿಗಳಾಗಿ ಬರುವ ವರು ಜಾಸ್ತಿಯೋ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗ ಹೇಳು ವುದಕ್ಕಾಗುವುದಿಲ್ಲ. ನೋಟೀಸ್ ಕೊಟ್ಟರೆ compare ಮಾಡಿ ಹೇಳುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಅತಿಥಿಗಳು ಮೈಸೂರಿನಲ್ಲಿ ಜಾಸ್ತಿಯಾಗಿ ಬರುತ್ತಾರೆಯೋ, ಬೆಂಗ ಳೂರಿನಲ್ಲಿ ಜಾಸ್ತಿಯಾಗಿ ಬರುತ್ತಾರೆಯೋ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು—ಬೆಂಗಳೂರು ಮೈಸೂರು ಎರಡೂ ದೊಡ್ಡ ಪಟ್ಟಣಗಳು, ಸುಂದರ ವಾದ ಸ್ಥಳಗಳಿವೆ. ಎರಡುಕಡೆಗೂ ಬರುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರಿಗೆ ದಸರಾ ಕಾಲದಲ್ಲೂ ಮತ್ತು ವರ್ಧಂತಿ ಕಾಲದಲ್ಲೂ ಅತಿಥಿಗಳನ್ನು ಕರೆಸತಕ್ಕ ಪದ್ಧತಿಯನ್ನು ಮುಂದೂ ಇಟ್ಟುಕೊಂಡಿದ್ದಾರೆಯೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು—ಮುಂದೆ ಏನಾಗುತ್ತದೆ ಎಂಬುದನ್ನು ಈಗಲೇ ಹೇಗೆ ಹೇಳುವುದ ಕ್ಕಾಗುತ್ತದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅತಿಥಿಗಳು ಬಂದವರು ನರಾನರಿ ಎಷ್ಟು ದಿನ ಇದ್ದರು ಎಂಬ ಲೆಕ್ಕ ಇದೆಯೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನರಾನರಿ ನೋಡಬೇಕು. ಎಷ್ಟು ಜನ ಬಂದರು, ಎಷ್ಟು ದಿನ ಉಳಿದುಕೊಂಡಿದ್ದರು, ಎಷ್ಟಾಗುತ್ತದೆ ಎಂಬುದನ್ನು ನೋಟೀಸ್ ಕೊಟ್ಟರೆ ಲೆಕ್ಕಾಚಾರ ಹಾಕಿ ತಿಳಿಸುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಒಬ್ಬ ಮನುಷ್ಯನಿಗೆ 216 ರೂಪಾಯಿ ಖರ್ಚಾಗಿದೆ. ಸರಾಸರಿ ಎಷ್ಟು ದಿನ ಊಟ ಮಾಡಿದ್ದಾರೆ ಎಂಬುದನ್ನು ರೆಕ್ಕಾಚಾರ ಹಾಕಿದ್ದೀರಾ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾನ್ಯ ಸದಸ್ಯರು ಹೇಳಿದ ಅಂಕಿ ಅಂಶ ಗೊತ್ತಿಲ್ಲ. ಅದಕ್ಕೆ ಉತ್ತರ ಕೊಡಲು ಸಾಧ್ಯವಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—Carriage and Aeroplane charges ಸೇರಿಲ್ಲ ಎಂದು ಹೇಳಿದಿರಿ. Carriage and Aeroplane charges ಎಷ್ಟು ಎಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗ ಹೇಳುವುದಕ್ಕಾಗುವುದಿಲ್ಲ, ನೋಟೀಸ್ ಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅದು entertainmentಗೆ ಸಂಬಂಧಪಟ್ಟದ್ದು ತಾನೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬೋರ್ಡಿಂಗ್ ಚಾರ್ಜಸ್, ಪೆಟ್ರೋಲ್ ಚಾರ್ಜಸ್ ಎಲ್ಲಾ ಸೇರಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ದೊಡ್ಡ ಮನುಷ್ಯರು ಯಾರಾದರೂ ಅತಿಥಿಗಳು ಬಂದರೆ ಈಗಿರೆ ತಕ್ಕ ಗೌರ್ನಮೆಂಟ್ ಹೌಸ್‌ಗಳಲ್ಲಿ, ಊಟದ ವ್ಯವಸ್ಥೆಗೆ ತಕ್ಕ ಏರ್ಪಾಡು ಮಾಡಿದ್ದೀರಲ್ಲವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕ್ವೆಸೆಂಟ್ ಹೌಸ್‌ನಲ್ಲಿ ಮಾತ್ರ ಮಾಡಿದೆ. ಆದರೆ accommodation ಸಾಲದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಗೌರ್ನಮೆಂಟ್ ಹೌಸ್‌ನಲ್ಲಿ ಮಾಡಿದ್ದೀರಾ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಯಾವುದು ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ರೆಸಿಡೆನ್ಸಿಯಲ್ಲಿ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾಡಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಲ್ಲಿಗೆ ಬರತಕ್ಕ ಅತಿಥಿಗಳು ಊಟಕ್ಕೆ ಆಗತಕ್ಕ ವೆಚ್ಚ ಕೊಟ್ಟು ತಕ್ಕ ವ್ಯವಸ್ಥೆ ಮಾಡಿಕೊಳ್ಳಬಹುದಲ್ಲವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ರೆಸಿಡೆನ್ಸಿಯಲ್ಲಿ 'Paying Guests' system introduce ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವರು guests ಆಗಿರುವುದು, ಕೆಲವರು paying guests ಆಗಿರುವುದು ಚೆನ್ನಾಗಿರುವುದಿಲ್ಲ. ಆದ್ದರಿಂದ ಕ್ವೆಸೆಂಟ್ ಹೌಸ್‌ನಲ್ಲಿ ಶಾಸನ ಸಭಾ ಸದಸ್ಯರು ಬರದೇ ಇರುವ ಕಾಲದಲ್ಲಿ paying guestsನ್ನು ತೆಗೆದುಕೊಳ್ಳುತ್ತಾರೆ. ಬಂದಾಗ ತೆಗೆದುಕೊಳ್ಳುವುದಿಲ್ಲ. ಒಂದೇ ಕಟ್ಟಡದಲ್ಲಿ ಎರಡು system introduce ಮಾಡುವುದು ಸರಿಯಾಗಿರುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಬೇರೆ ಕಟ್ಟಡ ತೆಗೆದುಕೊಂಡು ಊಟದ ವ್ಯವಸ್ಥೆ ಮಾಡಿ ಬಂದಂಥ ಅತಿಥಿಗಳಿಂದ ಅದಕ್ಕಾಗುವ ಖರ್ಚನ್ನು ವಸೂಲುಮಾಡಿಕೊಳ್ಳುವಂತೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದೇ ರೀತಿ ಮಾಡುತ್ತಾ ಇದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈಗ ಮಾಡಿದ್ದೀರಾ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕ್ವೆಸೆಂಟ್ ಹೌಸ್‌ನಲ್ಲಿ ಆ ಏರ್ಪಾಡು ಇದೆ ಎಂದು ಆಗಲೇ ಹೇಳಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಲ್ಲಿ ಸಾಲದೇಹೋದ ಪಕ್ಷದಲ್ಲಿ ಸ್ಥಳಾವಕಾಶ ಹೆಚ್ಚುವಾಡುವುದಕ್ಕೂ paying guestsನ್ನು receive ಮಾಡುವುದಕ್ಕೂ ತಕ್ಕ ಏರ್ಪಾಡುಮಾಡುತ್ತೀರಾ ?

Sri K. CHENGALARAYA REDDY.—I have already said that arrangements are being made. We have taken up another building where we intend to make these arrangements on a satisfactory basis on paying system.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಭಾರತ ಸರ್ಕಾರವ ಸೆಕ್ರೆಟರಿಗಳನ್ನೂ ಮತ್ತು ಅಸಿಸ್ಟೆಂಟ್ ಸೆಕ್ರೆಟರಿಗಳನ್ನೂ ನಮ್ಮ ಸ್ಟೇಟ್ ಗೆನ್ಸುಗಳಾಗಿ ತೆಗೆದುಕೊಂಡಿದ್ದುದು ನಿಜವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

Mr. SPEAKER.—Question time is over.

Sri D. H. CHANDRASEKHARAIYA (Chitaldrug District—General).—Questions were taken up five minutes late.

Mr. SPEAKER.—Only one or two minutes late.

Inclusion in the proceedings of Questions and Answers not taken up.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ನಾವು ಕಳುಹಿಸಿಕೊಡಲಾಗಿದ್ದ ಎಲ್ಲಾ ಪ್ರಶ್ನೆಗಳಿಗೂ ಸರ್ಕಾರದವರು ಇನ್ನೂ ಉತ್ತರಗಳನ್ನೊದಗಿಸಿರುವುದಿಲ್ಲ. ಹಾಗೆ ನಾವು ಕಳುಹಿಸಿರತಕ್ಕ ಪ್ರಶ್ನೆಗಳ ಪೈಕಿ ಯಾವು ಯಾವುದು ಈ ಸಭೆಯ ಮುಂದೆ ಬಂದಿರುವುದಿಲ್ಲವೋ ಅಂಥಾ ಪ್ರಶ್ನೆಗಳಿಗೂ ಸಹ ಅಬ್ಯೆರು ಅಧಿಕೃತ ವರದಿಯಲ್ಲಿ ಉತ್ತರಗಳನ್ನು ಒದಗಿಸಿ ಅಚ್ಚುಹಾಕಿಸತಕ್ಕ ಪದ್ಧತಿ ಇಲ್ಲಿಯತನಕ ಆಚರಣೆಯಲ್ಲಿ ಬಂದಿರುತ್ತೆ. ಆದರೆ ಇನ್ನು ಮುಂದಕ್ಕೂ ಅದೇ ಪದ್ಧತಿಯನ್ನು ಅನುಸರಿಸಲಾಗುತ್ತದೆಯೋ ಅಥವ ಅವನ್ನು ಏನಾದರೂ ಬದಲಾಯಿಸಿದ್ದಾರೋ ಗೊತ್ತಿಲ್ಲ. ಆ ವಿಚಾರವನ್ನು ಕೊಂಚ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಉತ್ತರಗಳು ಬಂದಿರತಕ್ಕಂಥ ಎಲ್ಲಾ ಪ್ರಶ್ನೆಗಳನ್ನೂ ಪ್ರೊಸೀಡಿಂಗ್ಸ್‌ನಲ್ಲಿ ಅಚ್ಚುಹಾಕಿಸಲಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಉತ್ತರ ಬಂದಿರುವ ಪ್ರಶ್ನೆಗಳಿಗೆ ಹಾಗೆ ಮಾಡಲಾಗುತ್ತದೆಂದು ತಿಳಿಸೋಣವಾಯಿತು. ಉತ್ತರ ಬಾರದಿರುವ ಪ್ರಶ್ನೆಗಳಿಗೆ ಯಾವ ರೀತಿ ಮಾಡಲಾಗುತ್ತದೆ ?

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಅಂಥಾ ಪ್ರಶ್ನೆಗಳಿಗೂ ಸಹ ಉತ್ತರವನ್ನು unstarred ಪ್ರಶ್ನೆಗಳಿಗೆ ಒದಗಿಸತಕ್ಕ ರೀತಿಯಲ್ಲಿ ಒದಗಿಸಿ ಅಚ್ಚು ಹಾಕಿಸಲಾಗುತ್ತದೆ.

Sri L. SIDDAPPA.—Will they be treated as unstarred questions and answers furnished ?

Mr. SPEAKER.—Yes.